ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 426/2017
ಪಿ.ಡಬ್ಲ್ಯೂ :1

ದಿನಾಂಕ: **22-07-2024** ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ವೈ ಎನ್ ಕೆ ವಕೀಲರಿಂದ

ದಾವಾ ಎ ಹಾಗೂ ಬಿ ಸ್ಥಳವನ್ನು ಹೋಗಿ ನೋಡಿರುತ್ತೇನೆ. ದಾವಾ ಎ ಸ್ಥಳ ಎನ್ನುವುದು ಸಾಗುವಾನಿ ಮರದ ತೋಟ ಎಂದರೆ ಸರಿ. ದಾವಾ ಬಿ ಶೆಡ್ಯೂಲ್ ಸ್ವತ್ತು ಎನ್ನುವುದು ಗೇರು ಕೃಷಿ ಭೂಮಿ ಎಂದರೆ ಸರಿ. ನಿಪಿ.2 ರಂತೆ ದಾವಾ ಎ ಶೆಡ್ಯೂಲ್ ಜಾಗ ಕೃಷಿ ಭೂಮಿ ಎಂದು ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ಮೊದಲು ಕೃಷಿ ಭೂಮಿ ಎಂದು ಇತ್ತು ಎಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಸ್ಥಳದಲ್ಲಿ ಮರಗಳು ಇರುವುದರಿಂದ ಅದನ್ನು ಅಭಿವೃದ್ದಿಪಡಿಸುವ ವಿಚಾರ ಬರುವುದಿಲ್ಲ ಎಂದರೆ ಸಾಕ್ಷಿ ಪಕ್ಕದಲ್ಲೇ ಕೃಷಿ ಭೂಮಿ ಇರುತ್ತದೆ ಎಂದು ನುಡಿಯುತ್ತಾರೆ. ಕೃಷಿ ಭೂಮಿಯ ಸರ್ವೆ ನಂಬ್ರ-30/11, 30/12, 30/13.

2. ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ 45 ವರ್ಷಗಳ ಹಿಂದಿನಿಂದಲೂ ಗೇರು ಕೃಷಿ ಮಾಡುತ್ತಾ ಬಂದಿರುತ್ತೇವೆ. ದಾವಾ ಎ ಶೆಡ್ಯೂಲ್ ಹಾಗೂ ಬಿ ಶೆಡ್ಯೂಲ್ ಸ್ವತ್ತುಗಳು ಪ್ರತ್ಯೇಕವಾಗಿ ಇರುತ್ತವೆ ಎಂದರೆ ಸಾಕ್ಷಿ ಒಂದಕ್ಕೊಂದು ತಾಗಿ ಇರುತ್ತವೆ ಎಂದು ನುಡಿಯುತ್ತಾರೆ. ದಾವಾ ಎ ಹಾಗೂ ಬಿ ಶೆಡ್ಯೂಲ್ ಸ್ಥಳದ ಮಧ್ಯ ಬೇಲಿ ಇದ್ದು ನೀರಿನ ತೋಡು ಹರಿದುಹೋಗುತ್ತದೆ ಎಂದರೆ ಸಾಕ್ಷಿ ಮಳೆ ಬಂದಾಗ ಸಾಮಾನ್ಯವಾಗಿ ನೀರು ಹರಿದು ಹೋಗುತ್ತದೆ ಎಂದು ನುಡಿಯುತ್ತಾರೆ. ತೋಡು ಎಂದು ಹೇಳುವುದು ಎ ಮತ್ತು ಬಿ ಶೆಡ್ಯೂಲ್ ನ ಮಧ್ಯ ಹರಿದು ಹೋಗುತ್ತದೆ ಎಂದರೆ ಸಾಕ್ಷಿ ಅದು ಚಿಕ್ಕ ತೋಡು ಎಂದು ನುಡಿಯ್ತುತ್ತಾರೆ. ದಾವಾ ಎ ಮತ್ತು ಬಿ ಶೆಡ್ಯೂಲ್ ಗಳು ಒಂದಕ್ಕೊಂದು ತಾಗಿಕೊಂಡು ಇರುತ್ತವೆ ಎಂದು ತೋರಿಸಲು ನಿಪಿ.1 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ.

3. ದಾವಾ ಬಿ ಶೆಡ್ಯೂಲ್ ಸ್ಥಳಕ್ಕೆ ಸಂಬಂದಪಟ್ಟಂತೆ ಹಕ್ಕು ಕೋರಿ ನಾವು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿರುವುದಿಲ್ಲ. ಮಂಜೂರಾತಿಗೆ ಸಂಬಂದಪಟ್ಟಂತೆ ಕಂದಾಯ ಇಲಾಖೆಗೆ ಫಾರಂ ನಂಬ್ರ- 50 ರಂತೆ ಅರ್ಜಿ ಕೊಡಬೇಕಿತ್ತು ಎಂದರೆ ಸಾಕ್ಷಿ, ಅದರಲ್ಲಿ ಕಾಟು ಮರಗಳು

ಇದ್ದವು ಎಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ನಲ್ಲಿ ಇರುವಂತಹ ಸಾಗುವಾನಿ ಮರಗಳಿಗೆ 20 ವರ್ಷ ವಯಸ್ಸಿರಬಹುದು. ಎ ಶೆಡ್ಯೂಲ್ ಸ್ವತ್ತಿನಲ್ಲಿ ಸಾಗುವಾನಿ ಮರಗಳಿದ್ದು, ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಗೇರು ಮರಗಳು ಇರುವುದರಿಂದ ಎರಡರ ಅಭಿವೃದ್ದಿಗೆ ಒಂದಕ್ಕೊಂದು ಅವಲಂಬಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮೊದಲು ಎ ಶೆಡ್ಯೂಲ್ ಸ್ವತ್ತಿನಲ್ಲಿ ಕೃಷಿ ಭೂಮಿ ಇತ್ತು ಎಂದು ನುಡಿಯುತ್ತಾರೆ.

4. ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ಕಟ್ಟಡ ಇರುವುದಿಲ್ಲ. ದಾವಾ ಬಿ ಶೆಡ್ಯೂಲ್ ಸ್ವತ್ತು ನಮ್ಮ ಸ್ವಾಧೀನದಲ್ಲಿ ಇದೆ ಎಂದು ತೋರಿಸಲು ಯಾವುದೇ ಕಂದಾಯ ದಾಖಲೆಯಲ್ಲಿ ಕಂಡು ಬರುತ್ತದಾ ಎಂದರೆ ಸಾಕ್ಷಿ, ಅದು ಎ ಶೆಡ್ಯೂಲ್ ಗೆ ಸಂಬಂದಪಟ್ಟಂತೆ ಕಂದಾಯ ರಶೀದಿಗಳು ಇರುತ್ತವೆ ಎಂದು ನುಡಿಯುತ್ತಾರೆ. ನನ್ನ ಮುಖ ವಿಚಾರಣೆ ಹಾಗೂ ದಾವಾ ಪತ್ರದಲ್ಲಿ ಹೇಳಿದಂತೆ ಎ ಶೆಡ್ಯೂಲ್ ನ ಅಬಿವೃದ್ದಿಗಾಗಿ ಬಿ ಸ್ವತ್ತಿನ ಜಾಗವನ್ನು ಉಪಯೋಗಿಸುತ್ತಿರುತ್ತೇವೆ ಎಂದು ಹೇಳಿದ್ದು ಅದು ಸುಳ್ಳಿನಿಂದ ಕೂಡಿರುತ್ತದೆ, ಆ ರೀತಿ ಬಿ ಶೆಡ್ಯೂಲ್ ಜಾಗವನ್ನು ತರಗೆಲೆ ಸೊಪ್ಪನ್ನು ಹಾಯಿಸುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಗೆ ಸೇರಿದ ಮನೆ ಇರುತ್ತದೆ ಎಂದರೆ ಸರಿಯಲ್ಲ.

5. ಪ್ರತಿವಾದಿಯವರೇ ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ ಗೇರು ಮರಗಳನ್ನು ನೆಟ್ಟು ಕೃಷಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಬಿ ಶೆಡ್ಯೂಲ್ ಸ್ವತ್ತಿನಲ್ಲಿ ನಮಗೆ ಕಮ್ಕಿ ಹಕ್ಕು ಹಾಗೂ ಖದಿಂ ಪಟ್ಟ ಬಂದಿರುತ್ತದೆ. ಸ್ವಾಧೀನತೆಯ ಹಕ್ಕು ಹಾಗೂ ಕುಮ್ಕಿ ಹಕ್ಕು ಎಂದು ತೋರಿಸಲು ದಾಖಲಾತಿ ಇರುತ್ತದೆಯಾ ಎಂದರೆ ಸಾಕ್ಷಿ ಅದಕ್ಕೆ ಯಾವುದೇ ದಾಖಲೆ ಇರುವುದಿಲ್ಲ, ಅದು ಖದೀಂ ಪಟ್ಟ ಆಗಿರುತ್ತದೆ ಎಂದು  ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಸ್ವತ್ತು ಕೃಷಿ ಭೂಮಿ ಅಲ್ಲದೇ ಇರುವುದರಿಂದ ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ಕುಮ್ಕಿ ಆಧಾರದಲ್ಲಿ ಎ ಶೆಡ್ಯೂಲ್ ಸ್ವತ್ತನ್ನು ವ್ಯವಸಾಯ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ, ಮೊದಲು ಅಲ್ಲಿ ಕೃಷಿ ಭೂಮಿ ಇತ್ತು ಎಂದು ನುಡಿಯುತ್ತಾರೆ. ಅದಕ್ಕೆ ತಾಗಿ ಮತ್ತೆ ಕೃಷಿ ಭೂಮಿ ಇತ್ತು ಎಂದು ನುಡಿಯುತ್ತಾರೆ. ದಾವಾ ಬಿ ಶೆಡ್ಯೂಲ್ ಸ್ವತ್ತು ಪ್ರತಿವಾದಿಗೆ ಸೇರಿದ ಸ್ಥಳವಾಗಿದ್ದು, ನನಗೆ ಆ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ